# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೂನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072**

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:-24.06.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾ.ರಾನಗರ ವಲಯ
2. ಶ್ರೀ.ಜಿ.ಮೋಹನ್‌ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ-73ಕೊಟ್ಟಿಗೆಪಾಳ್ಯ
3. ಶ್ರೀ.ಡಿ.ಹೇಮಂತ್, ಸಹಾಯಕ ಕಾರ್ಯಪಾಲಕ ಅಭಿಯಂತರರು,
4. ಶ್ರೀ.ಪ್ರಜ್ವಲ್, ಸಹಾಯಕ ಇಂಜಿನೀಯರ್, ಲಗ್ಗೆರೆ ಉಪ ವಿಭಾಗ.
5. ಶ್ರೀ.ವಿಶ್ವನಾಥ್ ನಾಯ್ಕ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ,
6. ಶ್ರೀ.ಚಿತ್ರಿತ.ಬಿ. ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
7. ಶ್ರೀ.ಮೋಹನ್ ಕುಮಾರ್, ಸಹಾಯಕ ಅಭಿಯಂತರರು, ಬೆಸ್ಕಾಂ.
8. ಶ್ರೀ.ಕೇಶವ ಮೂರ್ತಿ, ಕಿರಿಯ ಅಭಿಯಂತರರು, ಬೆಸ್ಕಾಂ.
9. ವಾರ್ಡ್ ಮಾರ್ಷಲ್‌ಗಳು
10. ಸೂಪರ್‌ವೈಸರ್‌ಗಳು
11. ಸಂಘ ಸಂಸ್ಥೆಗಳ ಪದಾಧಿಕಾರಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ದ.ರಾ.ಬೇಂದ್ರ ಉದ್ಯಾನವನದಲ್ಲಿನ ದೀಪಗಳು ಹಾಳಾಗಿವೆ ಹಾಗೂ 10ನೇ ಬ್ಲಾಕ್ & 11ನೇ ಬ್ಲಾಕ್‌ನಲ್ಲಿ ಬೆಳಗ್ಗಿನ ಜಾವದಲ್ಲಿಯೂ ಕೂಡ ಬೀದಿ ದೀಪಗಳು ಉರಿಯುತ್ತವೆ ಎಂದು ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 2 | 10ನೇ ಮತ್ತು 11ನೇ ಬ್ಲಾಕ್‌ಗಳಲ್ಲಿ ರಸ್ತೆ ಬದಿ ಚರಂಡಿಗಳಲ್ಲಿ ಹೂಳು ತುಂಬಿದ್ದು, ಅದನ್ನು ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಹಾಗೂ ರಾಜ ಕಾಲುವೆಯನ್ನು ನಿರ್ಮಿಸುವಂತೆ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |

Scanned with CamScanner

| | | | | |
|---|---|---|---|---|
| 3 | ಶ್ರೀನಿವಾಸನಗರ ಮತ್ತು ಮಾರುತಿ ಮಾರ್ಕಂಡೇಶ್ವರ ನಗರಗಳಲಿ ಮೋರಿಗಳಲ್ಲಿ ಸ್ವಚ್ಛಗೊಳಿಸುವಂತೆ ಹಾಗೂ ಮೋರಿ ನೀರು ರಸ್ತೆಗೆ ಹರಿಯುತ್ತಿರುವುದರಿಂದ ತುಂಬಾ ತೊಂದರೆಯಾಗುತ್ತಿದ್ದು, ರಸ್ತೆಗಳು ಹಾಳಾಗಿರುವುದನ್ನು ಕೂಡಲೇ ಕ್ರಮವಹಿಸುವಂತೆ ತಿಳಿಸಿರುತ್ತಾರೆ. ಮತ್ತು ರಸ್ತೆಗಳಿಗೆ ಡಾಂಬರೀಕರಣ ಮಾಡುವಂತೆ ಕೋರಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 4 | ಸಿದ್ದಾರ್ಥ ಬಡಾವಣೆಯ ರಸ್ತೆಗಳಲ್ಲಿ ಮಳೆ ನೀರು ಹಾದು ಹೋಗಲು ಮೋರಿ ವ್ಯವಸ್ಥೆ ಮಾಡುವಂತೆ ಹಾಗೂ ರಸ್ತೆಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ಹಾಗೂ ಬೀದಿ ದೀಪಗಳನ್ನು ಸರಿಪಡಿಸುವಂತೆ ಮತ್ತು ಬೆಳಗ್ಗಿನ ಜಾವ ಕೂಡ ಉರಿಯುತ್ತದೆ ಕೂಡಲೇ ಕ್ರಮವಹಿಸುವಂತೆ ತಿಳಿಸಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ & ಬೃಹತ್ ನೀರುಗಾಲುವೆ |
| 5 | ನಮ್ಮ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣ ಮಾಡಿ ಸುಮಾರು 5 ವರ್ಷ ಕಳೆದಿದ್ದು, ರಸ್ತೆಗಳು ಹಾಳಾಗಿರುತ್ತದೆ. ಗುಂಡಿಗಳನ್ನು ಮುಚ್ಚುವಂತೆ ಹಾಗೂ ಡಾಂಬರೀಕರಣ ಮಾಡುವಂತೆ ಕೋರಿರುತ್ತಾರೆ. | ಪ್ರಕೃತಿ ಅಸೋಸಿಯೇಟ್ಸ್ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 6 | ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪೈಪ್‌ಲೈನ್‌ಗಳನ್ನು ಹಾಕಿದ್ದು, ಇಂದಿರಾ ಪಾರ್ಕ್,ವಾಟರ್ ಪ್ಲಾಂಟ್‌ನ ಬಳಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 7 | ಕೆಂಚಮ್ಮ ಚೌಟರಿ, 40 ಅಡಿರಸ್ತೆಗಳಲ್ಲಿ ಪಾಟ್‌ಹೋಲ್ಸ್‌ಗಳನ್ನು ಮುಚ್ಚಿರುವುದಿಲ್ಲ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 8 | 6ನೇ ಕ್ರಾಸ್, ಶ್ರೀನಿವಾಸನಗರ ರಸ್ತೆಗಳಲ್ಲಿ ಕಲ್ವರ್ಟ್‌ಗಳು ತುಂಬಿದ್ದು, ಅದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 9 | 13ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆಗಳಲ್ಲಿ ಮರದ ಕೊಂಬೆಗಳನ್ನು ಕತ್ತರಿಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 10 | ಮಾಗಡಿ ಮುಖ್ಯರಸ್ತೆಯಿಂದ ಸೊಲ್ಲಾಪುರದಮ್ಮ ದೇವಸ್ಥಾನದ ವರೆಗೂ, 3ನೇ ಕ್ರಾಸ್, ಸೇಟು ಅಂಗಡಿ ಹತ್ತಿರ, ಸ್ಲಿಲ್ವ್‌ಗಳನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 11 | 6ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆ, ಶನಿಮಹಾತ್ಮ ದೇವಸ್ಥಾನದ ಬಳಿ ಕಲ್ಲುಗಳು ಬಿದಿದ್ದು, ಅದನ್ನು ತೆಗೆಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಕ್ರಮಕೈಗೊಳ್ಳಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Rajani M.N

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

24/06/2022

ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner